ಬೆಂಗಳೂರು ಮಹಾಧರ್ಮಕ್ಷೇತ್ರ

# ಸುತ್ತೋಲೆ



ಮಹಾಧರ್ಮಾಧ್ಯಕ್ಷರ ನಿಲಯ, 75, ಮಿಲ್ಲರ್ಸ್ ರಸ್ತೆ, ಬೆನ್ಸನ್ ಟೌನ್ ಅಂಚೆ
ಬೆಂಗಳೂರು – 560 046, ಕರ್ನಾಟಕ, ಭಾರತ, ದೂರವಾಣಿ: 23330438, ಫ್ಯಾಕ್ಸ್: 080–23531600
ಇ–ಮೇಲ್: archbishop@bangalorearchdiocese.com, ವೆಬ್‌ಸೈಟ್: www. bangalorearchdiocese.com

No. 6 ನವೆಂಬರ್ 2018

ಒಲವಿನ ಗುರುಗಳೇ, ಧಾರ್ಮಿಕ ಸಹೋದರ–ಸಹೋದರಿಯರೇ ಮತ್ತು ದೈವಪ್ರಜೆಗಳೇ,

## 1. ಸಕಲ ಸಂತರ ದಿನ

ಸಕಲ ಸಂತರ ದಿನವು ಮಹೋತ್ಸವವಾಗಿದ್ದು ನವೆಂಬರ್ ಒಂದರಂದು ಕೆಲವು ಭಾಗದ ಪಾಶ್ಚಾತ್ಯ ಕ್ರೈಸ್ತ ಸಭೆಗಳಲ್ಲಿ ಆಚರಿಸುತ್ತಾರೆ ಹಾಗು ಪೌರಾತ್ಯ ಕ್ರೈಸ್ತ ಸಭೆಗಳಲ್ಲಿ ಪಂಚದಶಮಿ ಹಬ್ಬದ ನಂತರದ ಮೊದಲ ಭಾನುವಾರದಂದು ಆಚರಿಸುತ್ತಾರೆ. ಈ ಹಬ್ಬದ ಮೂಲ ಉದ್ದೇಶವೇನೆಂದರೆ ಗೊತ್ತಿರುವ ಅಥವಾ ಗೊತ್ತಾಗದ ಸಂತರುಗಳ ಗೌರವಾರ್ಥವಾಗಿ ಆಚರಿಸುವಂತದ್ದಾಗಿದೆ. ಈ ಸುದಿನದಂದು ಯಾರ್‍ಯಾರು ಪಾರಮಾರ್ಥಿಕ ದರ್ಶನವನ್ನು ಸ್ವರ್ಗದಲ್ಲಿ ಅನುಭವಿಸುತ್ತಿದ್ದಾರೋ ಅವರೆಲ್ಲರ ಸ್ಮರಣೆಯಿದಾಗಿದೆ. ಕಥೋಲಿಕರು ಸಕಲ ಸಂತರ ಮತ್ತು ಸಕಲ ಆತ್ಮಗಳ ಸ್ಮರಣೆ ಮಾಡುವುದರ ಮೂಲ ಉದ್ದೇಶವು, ಅವರ ಪ್ರಾರ್ಥನಾ ಆಧ್ಯಾತ್ಮಿಕ ಬಾಂಧವ್ಯವು ಅನುಗ್ರಹದ ಹಂತದಲ್ಲಿರುವ ಅಗಲಿದ ವ್ಯಕ್ತಿಗಳು ಉತ್ತರಿಸುವ ಸ್ಥಳದಲ್ಲಿ ಪರಿಶುದ್ಧರಾಗಿಯೋ ಅಥವಾ ಸ್ವರ್ಗದಲ್ಲಿ ಮಹಿಮಾನ್ವಿತರಾಗಿಯೋ ಇರುವಂತವರು (ವಿಜಯೀ ಧರ್ಮಸಭೆ) ಅಥವಾ ಇಹಲೋಕದಲ್ಲಿ ಸೈತಾನನ ವಿರುದ್ಧ ಹೋರಾಡುತ್ತಾ (ಯಾತ್ರಾ ಧರ್ಮಸಭೆ) ಕ್ರಿಸ್ತನಿಗೆ ಸಾಕ್ಷಿಗಳಾಗಿ ಜೀವಿಸುವವರ ನಡುವಿನ ಬಾಂಧವ್ಯವಾಗಿದೆ.

ಜಗದ್ಗುರು ನಾಲ್ಕನೇ ಬೊನಿಪಾಸ್‌ರವರು ಸಕಲ ಸಂತರ ದಿನವನ್ನು ಅಧಿಕೃತವಾಗಿ ಆರಂಭಿಸಿದರು. ಕ್ರಿ.ಶ. 609ರಲ್ಲಿ ಮೇ ತಿಂಗಳ 13ರಂದು ರೋಮಿನಲ್ಲಿದ್ದಂತಹ ಸರ್ವದೇವರ ಮಂದಿರ (ಪಾಂಥಿಯೋನ್)ವೆಂದಿದ್ದ ಆಲಯವನ್ನು ಮಾತೆ ಮರಿಯಳಿಗೂ ಹಾಗು ಅಂದಿನ ಎಲ್ಲಾ ಧರ್ಮಸಾಕ್ಷಿಗಳಿಗೂ ಅರ್ಪಣೆ ಮಾಡಿದರು. ಅಂತೆಯೇ ನಾಲ್ಕನೇ ಬೊನಿಪಾಸರು ಸಕಲ ಆತ್ಮಗಳ ಸ್ಮರಣೆಯನ್ನು ಆರಂಭಿಸಿದರು.

ಕ್ರಮೇಣ, ನವೆಂಬರ್ 1ರಂದು ಸಂತರ ಸ್ಮರಣೆ ಹಾಗು ಅವರ ಪುಣ್ಯಸ್ಮಾರಕಗಳ ಗೌರವಾಚರಣೆಯನ್ನು ವಿಶ್ವಗುರು ಮೂರನೇ ಗ್ರೆಗೋರಿಯವರು ಎಂಟನೇ ಶತಮಾನದ

ಮಧ್ಯಭಾಗದಲ್ಲಿ ಆರಂಭಿಸಿದರು. ಅನಂತರ ಮೇ 13ರಂದು ಆಚರಿಸುವ ವಾಡಿಕೆಯನ್ನು ಕೈಬಿಡಲಾಯಿತು.

ಸ್ವರ್ಗದಲ್ಲಿರುವ ಸಂತರು ನಮ್ಮಂತೆಯೇ ಸಾಧಾರಣ ಹಾಗು ಸರಳ ಜೀವನ ನಡೆಸಿದವರು. ಅವರು ಸವಾಲುಗಳನ್ನು ಮತ್ತು ಯಾತನೆಗಳನ್ನು ಎದುರಿಸಿ, ಸೋಲುಗಳನ್ನು ಅನುಭವಿಸಿ, ನೋವು ಮತ್ತು ರೋಗಗಳನ್ನು ಅನುಭವಿಸಿದರಾದರೂ, ಕ್ರೈಸ್ತ ವಿಶ್ವಾಸದಲ್ಲಿ ದೃಢವಾಗಿ ನಾಟಿದ್ದು, ದೇವರಲ್ಲಿ ಅಚಲ ನಂಬಿಕೆ ಹಾಗು ವಿಶ್ವಾಸವನ್ನಿಟ್ಟು ಬಾಳಿದವರಿವರು. ಅವರಿಗೆದುರಾದ ಎಲ್ಲಾ ಯಾತನೆಗಳನ್ನು ಅವರ ರಕ್ಷಣೆಗಾಗಿಯೂ ಹಾಗು ಇಡೀ ವಿಶ್ವದ ರಕ್ಷಣೆಗಾಗಿಯೂ ಒಪ್ಪಿಕೊಂಡವರು. ನಮಗಾಗಿ ಇವರು ಪ್ರಾರ್ಥಿಸುತ್ತಾರಷ್ಟೇ ಅಲ್ಲದೆ, ಅವರ ಮಾದರಿ ಜೀವನದಿಂದ ನಮಗೆ ಪ್ರೇರಣೆಯಾಗಿದ್ದಾರೆ.

## 2. ನವೆಂಬರ್ 1 – ಕರ್ನಾಟಕ ರಾಜ್ಯೋತ್ಸವ ದಿನ

ಕರ್ನಾಟಕ ಜನರಿಗೆ ರಾಜ್ಯೋತ್ಸವವು ಸಂತಸ ಹಾಗು ಸಂಭ್ರಮದ ವಿಷಯವಾಗಿದೆ. ಭಾಷೆ, ಸಂಸ್ಕೃತಿ ಮತ್ತು ಪರಂಪರೆಯು ಕರ್ನಾಟಕದ ಏಳಿಗೆಯಾಗಿದ್ದು, ಕರ್ನಾಟಕದ ಹಿತಾಸಕ್ತಿಗಾಗಿ ನಾವು ನಮ್ಮ ಹಸ್ತಚಾಚಿ ಪ್ರೋತ್ಸಾಹಿಸಬೇಕು. ಹಾಗೆ ನೋಡಿದ್ದಲ್ಲಿ ಇತರ ರಾಜ್ಯಗಳಿಗಿಂತ ನಮ್ಮ ನಾಡು ಹೇಗೆ ವಿಭಿನ್ನವಾಗಿದೆಯೆಂದರೆ, ನಮ್ಮ ಜನರಲ್ಲಿರುವ ಐಕ್ಯತಾಭಾವ, ಬೇರೆಯವರನ್ನು ಆದರಿಸುವ ಹೃದಯ ವೈಶಾಲ್ಯತೆಯ ಜೊತೆಗೆ, ಇತರ ಭಾಷೆ ಸಂಸ್ಕೃತಿಯ ಜನರನ್ನು ಸೌಹಾರ್ದತೆಯಿಂದ ಕಾಣುವುದೇ ಇಲ್ಲಿನ ಜನರ ವಿಶೇಷತೆ. ನಮ್ಮ ನಾಡಿನ ಒಳಿತು ಹಾಗು ಪ್ರಗತಿಗಾಗಿ ವಿಶೇಷ ಪ್ರಾರ್ಥನೆಗಳನ್ನು ಕೈಗೊಳ್ಳಿರಿ ಎಂದು ವಿನಂತಿಸುತ್ತೇನೆ.

## 3. ಸಕಲ ಆತ್ಮಗಳ ದಿನ

ನವೆಂಬರ್ 2 ರಂದು, ಸಕಲ ಆತ್ಮಗಳ ದಿನವಾಗಿರುವುದರಿಂದ ಧರ್ಮಸಭೆಯ ಪಂಚಾಂಗದಲ್ಲಿ ಅದು ವಿಶೇಷ ದಿನವಾಗಿದೆ. ಏಕೆಂದರೆ ಅಂದು ಮೃತಹೊಂದಿದವರಿಗಾಗಿ ಪ್ರಾರ್ಥಿಸಬೇಕು. ಕ್ರೈಸ್ತರಾದ ನಮಗೆ ದೇವಾಲಯವನ್ನು ಹೊರತುಪಡಿಸಿ ಸಮಾಧಿಯು ಮತ್ತೊಂದು ಪವಿತ್ರ ಸ್ಥಳವಾಗಿದೆ. ನಿಮ್ಮ ಸರಹದ್ದಿಗೆ ಬರುವ ಎಲ್ಲಾ ಸಮಾಧಿಗಳನ್ನು ಮಂತ್ರಿಸಿರಿ. ಹಾಗೆಯೇ ಸಮಾಧಿ ಸ್ಥಳಗಳನ್ನು ಶುಚಿಮಾಡಿ ದೈವಾರಾಧನಾ ವಿಧಿಗಳಿಗೆ ಅಣಿಗೊಳಿಸಿರಿ.

## 4. ಮಹಾಧರ್ಮಕ್ಷೇತ್ರದ ಬೈಬಲ್ ಫೆಸ್ಟ್ 2018

ಮಹಾಧರ್ಮಕ್ಷೇತ್ರದ ಬೈಬಲ್ ಮತ್ತು ಧರ್ಮೋಪದೇಶ ಸಮಿತಿಯು, ಬರುವ 2ನೇ ಡಿಸೆಂಬರ್ 2018ರಂದು ಸಂತ ಅಲಾಷಿಯಸ್ ಕಾಲೇಜು, ಕಾಕ್ಸ್‌ಟೌನ್‌ನಲ್ಲಿ

ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ಧರ್ಮಕೇಂದ್ರದ ಭಾನುವಾರ ಧರ್ಮೋಪದೇಶ ಮಕ್ಕಳಿಗಾಗಿ 'ಯೇಸುವನ್ನು ಎಲ್ಲರಿಗೂ ಸಾರುವುದು' ಎಂಬ ಶೀರ್ಷಿಕೆಯಡಿ 'ಬೈಬಲ್ ಉತ್ಸವ 2018' ಅನ್ನು ಹಮ್ಮಿಕೊಂಡಿದೆ. ಪವಿತ್ರ ಗ್ರಂಥ ಕುರಿತು ಅನ್ವೇಷಣೆ ಹಾಗು ಪವಿತ್ರ ಗ್ರಂಥದ ಮೇಲಿನ ಪ್ರೀತಿ, ಪವಿತ್ರ ಗ್ರಂಥದ ಬಗ್ಗೆ ಹೆಚ್ಚು ಪ್ರಜ್ಞಾವಂತರಾಗಲು ಇದೊಂದು ವಿಶೇಷ ಅವಕಾಶವಾಗಿದೆ.

'ಬೈಬಲ್ ಫೆಸ್ಟ್ 2018', ಧರ್ಮಕೇಂದ್ರ ಧರ್ಮೋಪದೇಶ ಮಕ್ಕಳಿಗಾಗಿ ನಡೆಸಿಕೊಡುತ್ತಿರುವ ಪ್ರಥಮ ಪವಿತ್ರ ಗ್ರಂಥಾದಾರಿತ ಕಾರ್ಯಕ್ರಮವಿದು. ಆದ್ದರಿಂದ ಎಲ್ಲಾ ಧರ್ಮಕೇಂದ್ರದ ಗುರುಗಳು ಧರ್ಮಕೇಂದ್ರದ ಮಕ್ಕಳನ್ನು ಕ್ರಿಯಾತ್ಮಕತೆಯಿಂದ ಭಾಗವಹಿಸಲು ಸಹಕರಿಸಿ ನೆರವಾಗಿರಿ. ಮಿಂಚಂಚೆಯ (abcatecom@gmail.com) ಮೂಲಕ ಅಥವಾ ಕಚೇರಿಯ ಫೋನ್ ಸಂಖ್ಯೆ 080–23096552, ಕರೆಮಾಡಿ. 18ನೇ ನವೆಂಬರ್ 2018ರೊಳಗೆ ನಿಮ್ಮ ಪಾಲ್ಗೊಳ್ಳುವಿಕೆಯನ್ನು ಕಾಯ್ದಿರಿಸಿಕೊಳ್ಳಿರಿ. ನಿಮ್ಮ ವೈಯಕ್ತಿಕ ಪ್ರಸನ್ನತೆಯನ್ನು ಸಹ ಬೈಬಲ್ ಫೆಸ್ಟ್‌ನಲ್ಲಿ ಮಕ್ಕಳನ್ನು ಪ್ರೋತ್ಸಾಹಿಸಲು ಕಾಣಲಿಚ್ಛಿಸುತ್ತೇನೆ.

ಪ್ರತಿ ಧರ್ಮಕೇಂದ್ರದಿಂದ (ಒಂದನೇ ತರಗತಿಯಿಂದ 10ನೇ ತರಗತಿಯವರೆಗಿನ) ಆಯ್ದ 20 ಧರ್ಮೋಪದೇಶ ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಳ್ಳಬಹುದು. ಎಲ್ಲಾ ಕಾರ್ಯಕ್ರಮಗಳಲ್ಲಿ ಎಲ್ಲಾ ಧರ್ಮಕೇಂದ್ರಗಳು ಭಾಗವಹಿಸಬಹುದು. ಪ್ರತಿಯೊಂದು ಕಾರ್ಯಕ್ರಮಕ್ಕು ಮೂರು ಬಹುಮಾನಗಳಿರುತ್ತವೆ. ಪ್ರತಿಯೊಂದು ಕಾರ್ಯಕ್ರಮದಲ್ಲಿ ಭಾಗವಹಿಸುವುದರ ಮೂಲಕ ಐದು ಅಂಕಗಳನ್ನು ಧರ್ಮಕೇಂದ್ರ ಗಳಿಸಿಕೊಳ್ಳುತ್ತದೆ. ಮಕ್ಕಳ ಶಿಸ್ತನ್ನು ಆದರಿಸಿ ವಿಶೇಷ ಅಂಕಗಳನ್ನು ನೀಡಲಾಗುವುದು. ಒಂದು ವಿಜೇತ ರೋಲಿಂಗ್ ಟ್ರೋಪಿ ಮತ್ತು ಎರಡು ರನ್ನರ್ ಆಫ್ ಟ್ರೋಫಿಗಳನ್ನು ಹೆಚ್ಚು ಅಂಕಗಳಾಧಾರದ ಮೇಲೆ ಧರ್ಮಕೇಂದ್ರಗಳಿಗೆ ನೀಡಲಾಗುವುದು. ಕಾರ್ಯಕ್ರಮಗಳು ಇಂತಿವೆ: ಬೈಬಲ್ ರಸಪ್ರಶ್ನೆ, ಬೈಬಲ್ ಆಧಾರಿತ ನೃತ್ಯ ಸಂಯೋಜನೆ, ಬೈಬಲ್ ಆಧಾರಿತ ನಾಟಕ, ಬೈಬಲ್ ಆಧಾರಿತ ಪ್ಯಾನ್ಸಿ ಡ್ರೆಸ್, ಬೈಬಲ್ ಆಧಾರಿತ ಚಿತ್ರಕಲೆ, ಹಾಗು ಬೈಬಲ್ ಆಧಾರಿತ ಕೀರ್ತನೆ ಅಥವಾ ಇತರ ಬೈಬಲ್ ಭಾಗಗಳ ಪಠಣ.

## 5. 3ನೇ ಡಿಸೆಂಬರ್ ಮಹಾಧರ್ಮಕ್ಷೇತ್ರದ ಪಾಲಕ ಸಂತ ಫ್ರಾನ್ಸಿಸ್ ಕ್ಸೇವಿಯರ್‌ರವರ ಹಬ್ಬ

ಸಂತ ಫ್ರಾನ್ಸಿಸ್ ಕ್ಸೇವಿಯರ್ ಪ್ರಧಾನಾಲಯವು ಧರ್ಮಕ್ಷೇತ್ರದ ತಾಯಿ ಧರ್ಮಸಭೆಯಾಗಿದೆ. ಹಲವಾರು ದೇವಾಲಯಗಳಲ್ಲಿ ಹಬ್ಬಗಳನ್ನು ಮಾಡುವುದು, ಅದರಲ್ಲೂ ವಿಶೇಷವಾಗಿ ಸಂತರುಗಳು ಧರ್ಮಕೇಂದ್ರದ ಪಾಲಕರೆನಿಸಿಕೊಂಡವರ

ಹಬ್ಬವನ್ನು ಭಾನುವಾರಗಳಲ್ಲಿ ಆಚರಿಸುವುದು ಜನಸಾಮಾನ್ಯರ ಅನುಕೂಲಕ್ಕಾಗಿ. ಸಂತ ಫ್ರಾನ್ಸಿಸ್ ಕ್ಸೇವಿಯರ್‌ರವರ ಹಬ್ಬದ ಪೂಜೆಯನ್ನು ಪಾಲಕರ ದಿನವಾದ ಡಿಸೆಂಬರ್ 3ರಂದೇ (ಸಂಜೆ 5:00 ಗಂಟೆಗೆ) ನಾನು ಆಚರಿಸಲು ಇಚ್ಛಿಸುತ್ತೇನೆ. ಮಹಾಧರ್ಮಕ್ಷೇತ್ರದ ಎಲ್ಲಾ ಗುರುಗಳು ಹಾಗು ನಗರ ಧರ್ಮಕೇಂದ್ರಗಳಿಂದ ಪ್ರತಿನಿಧಿಗಳು ಹಬ್ಬದ ದಿನದಂದು ಪವಿತ್ರ ಬಲಿಪೂಜೆಯಲ್ಲಿ ಭಾಗವಹಿಸಲು ಆಶಿಸುತ್ತೇನೆ. ನಮ್ಮ ಸ್ವರ್ಗೀಯ ಪಾಲಕರಾದ ಸಂತ ಫ್ರಾನ್ಸಿಸ್ ಕ್ಸೇವಿಯರ್‌ರವರು, ನಮ್ಮನ್ನು ಉತ್ತಮ ಶುಭಸಂದೇಶ ಪ್ರಚಾರಕರಾಗಲು ನಮ್ಮ ಮನೋನೇತ್ರಗಳನ್ನು ತೆರೆಯಲಿ. ಭಾಷೆ, ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಮೀರಿ ಎಲ್ಲಾ ಕಾಲಗಳಲ್ಲೂ ಕ್ರಿಸ್ತನ ಸಂದೇಶವನ್ನು ಸಾರಲು ನಮಗೆ ನೆರವಾಗಲಿ ಎಂದು ಪ್ರಾರ್ಥಿಸೋಣ.

## 6. ಬಡವರ ದಿನ

ಕಳೆದ ವರ್ಷದಿಂದ ವಿಶ್ವಗುರು ಫ್ರಾನ್ಸಿಸರು 33ನೇ ಭಾನುವಾರ (18ನೇ ನವೆಂಬರ್) ವನ್ನು ಬಡವರ ದ್ವಿತೀಯ ವಿಶ್ವ ದಿನವನ್ನಾಗಿ ಮೀಸಲಿಡಲು ಕೇಳಿಕೊಂಡಿದ್ದಾರೆ. "ನಿರ್ಗತಿಕ ಮೊರೆಯಿಡಲು ಪ್ರಭು ಕಿವಿಗೊಟ್ಟರು, ಎಂಬುದು ಇದರ ಶೀರ್ಷಿಕೆ" (ಕೀರ್ತನೆ 34:6). ಇದರ ಉದ್ದೇಶವನ್ನು ಬೈಬಲ್ಲಿನಲ್ಲಿ ಉಲ್ಲೇಖಿಸಿರುವಂತೆ 'ಬಡವರು ಯಾವಾಗಲೂ ನಮ್ಮೊಡನಿದ್ದಾರೆ, ಅವರಿಗೆ ನಾವು ಏನಾದರೂ ಒಳಿತು ಮಾಡಬೇಕು' (ಮಾರ್ಕ 14:7). ಈ ನಿಟ್ಟಿನಲ್ಲಿ ನಮ್ಮ ಮಾತಿಗೂ ಹಾಗು ಕೃತ್ಯಕ್ಕೂ ದೊಡ್ಡ ಅಂತರವಿದೆ. ನಮ್ಮದೇ ನಗರ, ಭಾರತದ ಸಿಲಿಕಾನ್ ನಗರವೆಂದು ಸಾಮಾನ್ಯವಾಗಿ ಕರೆಸಿಕೊಂಡರೂ, ಅದೆಷ್ಟೋ ಮಂದಿ ಬಡವರಿದ್ದಾರೆಂಬುದನ್ನು ನಾವು ಅಲ್ಲೆಗಳೆಯುವಂತಿಲ್ಲ. ಕೆಲಸದ ಹುಡುಕಾಟದಲ್ಲಿ ಹಾಗು ದೈನಂದಿನ ಜೀವನಾಂಶಕ್ಕಾಗಿ ಇಡೀ ದೇಶದಿಂದಲೇ ಬೆಂಗಳೂರಿಗೆ ಬರುತ್ತಿರುವ ವಲಸಿಗರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಹಾಗೆಯೇ ಸೂರಿಲ್ಲದೆ, ಕೆಲಸವಿಲ್ಲದೆ ಇರುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಆಗಸ್ಟ್ ತಿಂಗಳಲ್ಲಿ ಕೊಡಗು ಮತ್ತು ಕೇರಳದಲ್ಲಾದ ಪ್ರವಾಹ ಹಾಗು ಭೂ ಕುಸಿತಕ್ಕೆ ಮನೆಮಠ ಕಳೆದುಕೊಂಡು ನಿರಾಶ್ರಿತರಾದಂತವರಿಗೆ ನಮ್ಮ ಮನವಿಯನ್ನು ಗೌರವಿಸಿ ನೆರವಿಗೆ ಬಂದಂತಹ ರೀತಿಯನ್ನು ಕಂಡು ನನಗೆ ಸಂತಸವಾಯಿತು. ಪ್ರಸ್ತುತದಲ್ಲಿ ಪ್ರವಾಹ ಪೀಡಿತರ ಮನೆಗಳನ್ನು ಕಟ್ಟುವ ಕಾರ್ಯದಲ್ಲಿ ಈಗ ನಾವು ತಲ್ಲೀನರಾಗಿದ್ದೇವೆ. ಮತ್ತೆ ಕೆಲವರು 'ಆಶಾ' ಸಂಸ್ಥೆಗೆ ಸಹಾಯ ಮಾಡುವುದರ ಮೂಲಕ ಬಡಮಕ್ಕಳ ವಿದ್ಯಾರ್ಜನೆಗೆ ನೆರವಾಗುತ್ತಿರುವಿರಿ.

ಆದರೂ ಬಡವರಿಗಾಗಿ ಇನ್ನೂ ಹೆಚ್ಚು ನಾವು ಮಾಡಬೇಕಿದೆ. ನಮ್ಮ ಕೆಲವು ಶಿಕ್ಷಣ ಸಂಸ್ಥೆಗಳು ಬಡವರಿಗೆ ಇನ್ನೂ ಏನೂ ಮಾಡುತ್ತಿಲ್ಲ. ಇದರ ಜೊತೆಗೆ ದೇವಾಲಯಗಳಲ್ಲಿ

ದುಂದುವೆಚ್ಚ ಹೆಚ್ಚಿರುವುದನ್ನು ನಾನು ಕಂಡಿದ್ದೇನೆ. ದೇವರು ಮತ್ತು ಸಂತರುಗಳನ್ನು ಆರಾಧಿಸಿ/ಗೌರವಿಸುವುದು ನಮ್ಮ ಸರಳತೆ ಮತ್ತು ದೀನ ಹೃದಯದಿಂದ ಕೂಡಿರಬೇಕು. ಅದಕ್ಕೆ ಬದಲು ದೇವಾಲಯದ ಒಳಗೆ ಮತ್ತು ಹೊರಗೆ ವಿಸ್ತಾರವಾದ ಅಲಂಕಾರಗಳು, ಯತೇಚ್ಛವಾದ ಹೂ ಗುಚ್ಛಗಳು, ಹೆಚ್ಚುವೆಚ್ಚದಲ್ಲಿ ನಿರ್ಮಿತಗೊಳ್ಳುವ ತೇರಿನ ಅಲಂಕಾರಗಳು ಅಂತೆಯೇ ದುಬಾರಿ ಜೀವನಶೈಲಿ, ಇವೆಲ್ಲವನ್ನು ಒಂದೆಡೆಯಿಟ್ಟು ಧರ್ಮಕೇಂದ್ರದಲ್ಲಿರುವ ಬಡವರಿಗಾಗಿ ಉಳಿತಾಯಮಾಡಿ ಹಂಚಿಕೊಳ್ಳಬಹುದಲ್ಲವೇ?

ದೇವಾಲಯದ ಇಂತಹ ಬಾಹ್ಯ ಅಲಂಕಾರಗಳಿಗೆ ದಾನ ಮಾಡಲು ಮುಜುಗರಪಡದೆ ಬಡವರಿಗೆ ಧಾನಧರ್ಮ ಮಾಡಲು ಹಿಂದೆ ಸರಿಯುವ ಹಲವು ಜನರನ್ನು ಕಂಡಾಗ ದುಃಖವೆನಿಸುತ್ತದೆ. ಮುಂದಿನ ವರ್ಷಗಳಲ್ಲಿ, ಮಹಾಧರ್ಮಕ್ಷೇತ್ರದ ಬಡವರಿಗಾಗಿ ಸ್ವಲ್ಪ ಶೇಕಡವಾರು ಬಡ್ಜೆಟ್ ಮೊತ್ತವನ್ನು ನಿಗದಿಪಡಿಸಲು ನಾನು ಯೋಜಿಸಿದ್ದೇನೆ. ಈ ದಿಸೆಯಲ್ಲಿ ನಗರದ ಧರ್ಮಕೇಂದ್ರಗಳು ಮತ್ತು ಸಂಸ್ಥೆಗಳು ಇದನ್ನು ವಿಶೇಷವಾಗಿ ಅನುಸರಿಸಲು ಕೇಳಿಕೊಳ್ಳುತ್ತೇನೆ.

ಹೀಗೆ ಮಾಡುವುದರ ಮೂಲಕ ಮಾತ್ರವೇ ಬಡವರ ದಿನವನ್ನು ಅರ್ಥಭರಿತವಾಗಿರಿಸಲು ಸಾಧ್ಯ. ವಿಶ್ವಗುರು ಫ್ರಾನ್ಸಿಸರು ಬಡತನದ ವಿಷಯದಲ್ಲಿ ಹೇಳಿರುವ "ಅದು ಆಗಿರುವುದು ಸ್ವಾರ್ಥದಿಂದ, ಅಹಂಕಾರದಿಂದ, ದುರಾಸೆಯಿಂದ ಮತ್ತು ಅನ್ಯಾಯದಿಂದ. ಇವು ಮಾನವ ಸಂಕುಲದಷ್ಟೇ ಹಳೇ ಕೆಡುಕುಗಳು. ಇವುಗಳು ಪಾಪಗಳಾಗಿವೆ ಆದರೆ ಅಮಾಯಕರು ಇದರಲ್ಲಿ ಸಿಲುಕಿಕೊಂಡು ಸಾಮಾಜಿಕ ಸ್ತರದಲ್ಲಿ ವ್ಯತಿರಿಕ್ತ ಪರಿಣಾಮಗಳನ್ನು ಎದುರಿಸುವವರಾಗಿದ್ದಾರೆ" ಎಂಬ ವಾಕ್ಯಗಳನ್ನು ಮರೆಯದಿರೋಣ.

## 7. ಸಮಾಧಿಗಳ ವಿಷಯ

ನಮ್ಮನ್ನು ಅಗಲಿದವರನ್ನು ಗೌರವದಿಂದ ಸಮಾಧಿ ಮಾಡುವುದು ದಯಾಕ್ರಿಯೆಗಳಲ್ಲಿ ಒಂದಾಗಿದೆ. ಆದರೆ ನಗರದ ಹಲವಾರು ಧರ್ಮಕೇಂದ್ರಗಳಲ್ಲಿ ಮೃತರ ಸಮಾಧಿ ಮಾಡುವುದು ಸಮಸ್ಯೆಯಾಗಿದೆ. ಈಗಿರುವ ಸಮಾಧಿಗಳು ತುಂಬಿಹೋಗಿದ್ದು ಸರಿಯಾಗಿ ಸಂಘಟಿಸಲಿಲ್ಲ. ಇದರಿಂದ ಮೃತರ ಸಂಬಂಧಿಕರಿಗೂ ಹಾಗು ಧರ್ಮಕೇಂದ್ರದ ಗುರುಗಳಿಗೂ ಅದು ಆತಂಕದ ವಿಷಯವಾಗಿದೆ. ನಗರದಲ್ಲಿ ಹೊಸ ಸಮಾಧಿಗಳನ್ನು ಪಡೆಯುವುದು ಅಸಾಧ್ಯದ ಮಾತಾಗಿದೆ. ಹಾಗಾಗಿ ಈ ಹೊಸ ಸವಾಲುಗಳನ್ನು ಸಮರ್ಪಕವಾಗಿ ನಿಭಾಯಿಸಲು ಹೊಸ ರೀತಿ–ನೀತಿಗಳಾದ, ಸಮಾಧಿಯ ಕಟ್ಟಡ ನಿರ್ಮಾಣಕ್ಕೆ ತಡೆಹಾಕುವಿಕೆ, ಮೃತರ ಮಣ್ಣುಮಾಡಲು ಸಮಾಧಿಯ ಮರುಬಳಕೆಗಾಗಿ ಸಮಯದ ನಿಗದಿಪಡಿಸುವಿಕೆ, ಸಮಾಧಿಯ ಗೋಡೆಗಳಲ್ಲಿ ಗೂಡುಗಳ ನಿರ್ಮಾಣ

ಇತ್ಯಾದಿ ಸಮಸ್ಯೆಗಳನ್ನು ಚರ್ಚಿಸಿ, ಪರಿಹಾರಗಳನ್ನು ಒಟ್ಟಾರೆಯಾಗಿ ಕಂಡುಕೊಳ್ಳಲು ಮಹಾಧರ್ಮಕ್ಷೇತ್ರದ ಕ್ಯೂರಿಯ/ಕಾರ್ಯಾಲಯದ ಅಧಿಕಾರಿಗಳನ್ನು, ವಲಯಾಧಿಕಾರಿಗಳನ್ನು, ಸಮಾಧಿ ಸ್ಥಳಗಳ ಧರ್ಮಕೇಂದ್ರ ಗುರುಗಳನ್ನು ಹಾಗು ಸಮಸ್ಯೆಗಳಿರುವ ಸಮಾಧಿ ಸ್ಥಳಗಳಿರುವ ಧರ್ಮಕೇಂದ್ರ ಗುರುಗಳನ್ನು ದಿನಾಂಕ 21ನೇ ನವೆಂಬರ್ 2018, ಮಧ್ಯಾಹ್ನ 2:30 ಗಂಟೆಗೆ ಪಾಲನಾ ಭವನದಲ್ಲಿ ಸಭೆ ಕರೆದಿದ್ದೇನೆ. ಅಂತೆಯೇ ಸೂಕ್ತ ಸಲಹೆಗಳನ್ನು ನೀಡುವ ನಿಮ್ಮ ಧರ್ಮಕೇಂದ್ರದ ಜನಸಾಮಾನ್ಯರಿಗೂ ಈ ಸಭೆಗೆ ಆಹ್ವಾನಿಸಬೇಕಾಗಿ ವಿನಂತಿ.

## 8. ಯುವಕರ ಸಿನೋಡ್ (ಸಭೆ)

ಪರಿಶುದ್ಧ ತಂದೆ ವಿಶ್ವಗುರು ಫ್ರಾನ್ಸಿಸರು ಪ್ರಸ್ತುತ ಪ್ರಮುಖ ಅಂಶವೆನಿಸಿಕೊಂಡಿರುವ "ಯುವ ಜನತೆ, ವಿಶ್ವಾಸ ಮತ್ತು ವೃತ್ತಿಪರ ವಿವೇಚನೆ" ಎಂಬ ವಿಷಯದ ಬಗ್ಗೆ ಧರ್ಮಾಧ್ಯಕ್ಷರ ಸಿನೋಡ್ ಸಭೆಯನ್ನು ಕರೆದಿರುವುದು ಚರಿತ್ರೆಯಲ್ಲಿ ಇದಕ್ಕಿಂತ ಉತ್ತಮವಾದ ಸಮಯ ಬೇರೊಂದಿಲ್ಲವೆಂದೇ ಹೇಳಬೇಕು. ಯುವಕರ ಕುರಿತ ಧರ್ಮಾಧ್ಯಕ್ಷರ 15ನೇ ಸಾಮಾನ್ಯ ಕೂಟವು ರೋಮಿನಲ್ಲಿ 3ನೇ ಅಕ್ಟೋಬರ್‌ನಿಂದ 28ರವರೆಗೆ ನಡೆಯುತ್ತದೆ. ಸಿನೋಡ್ ಸಭೆಯ ಮುಖ್ಯ ಗುರಿಯೇನೆಂದರೆ ಯುವಕರ ಭವಿಷ್ಯ ಜೀವನವನ್ನು ಕಂಡುಕೊಳ್ಳುವ ಹಾದಿಯಲ್ಲಿ ಅದನ್ನು ಸಂತೋಷದಿಂದ ಅರಿತುಕೊಳ್ಳುವ ವಿವೇಚನೆಯನ್ನು ಹಾಗು ಅವರ ನೈಜ ಜೀವನದ ಯಾತ್ರೆಯಲ್ಲಿ ಪರಿಪಕ್ವತೆಯನ್ನು ಕಾಣಿಸುವುದೇ ಇದರ ಮುಖ್ಯ ಗುರಿಯಾಗಿದೆ.

## 9. ಕನ್ನಡದಲ್ಲಿ ಆಶೀರ್ವಾದದ ಪುಸ್ತಕ

ಪ್ರಾಂತೀಯ ದೈವಾರಾಧನಾ ಸಮಿತಿಯು ಕನ್ನಡಕ್ಕೆ ಆಶೀರ್ವಾದದ ಪುಸ್ತಕವನ್ನು ತರ್ಜುಮೆ ಮಾಡಿ ಪ್ರಕಟಿಸಿದ್ದಾರೆ. ಈಗ ಅದು ನಮ್ಮ ಬಳಕೆಗಾಗಿ ಸಿದ್ಧವಿದೆ. ಕೆಆರ್‌ಸಿಬಿಸಿ ಮತ್ತು ರೋಮಿನಿಂದ ಅಧಿಕೃತವಾಗಿ ಭಾಷಾಂತರಿಸಲ್ಪಟ್ಟ ಕೃತಿಯಾಗಿದ್ದು ಬೇರೆ ಬೇರೆ ಸಂದರ್ಭಗಳಿಗನುಸಾರವಾಗಿ 40 ಆಶೀರ್ವಾದಗಳನ್ನೊಳಗೊಂಡಿದೆ. ಇದರ ಬೆಲೆಯನ್ನು 750 ರೂಗಳಿಗೆ ನಿಗದಿ ಮಾಡಲಾಗಿದೆ. ಈ ಪುಸ್ತಕವು ದೊಡ್ಡದಾಗಿದ್ದು ಎಲ್ಲೆಡೆ ಕೊಂಡೊಯ್ಯಲು ಕಷ್ಟವೆನಿಸುತ್ತದೆ. ಆದ್ದರಿಂದ ಸಣ್ಣ ಕೈಪಿಡಿಯಲ್ಲಿ ಕುಟುಂಬದ ವಾರ್ಷಿಕ ಮಂತ್ರಿಸುವಿಕೆ, ರೋಗಿಗಳಿಗೆ ಪರಮ ಪ್ರಸಾದದ ವಿಧಿಯಾಚರಣೆಯನ್ನು ಮುಂದ್ರಿಸಲಾಗಿದೆ. ಈ ಸಣ್ಣ ಕೈಪಿಡಿಯನ್ನು ಪೂರಕವಾಗಿ ಆಶೀರ್ವಾದದ ಪುಸ್ತಕದೊಂದಿಗೆ ನೀಡಲಾಗುವುದು. ಎಲ್ಲಾ ಧರ್ಮಕೇಂದ್ರ ಗುರುಗಳು ಇದನ್ನು ಕೊಂಡುಕೊಂಡು ಧರ್ಮಕೇಂದ್ರದಲ್ಲಿ ಕಾಯ್ದಿರಿಸಿ ಉಪಯೋಗಿಸಲು ಉತ್ತೇಜಿಸುತ್ತೇನೆ.

## 10. ಆರಾಧನಾ ವಿಧಿಯ ಪಂಚಾಂಗ 2018–2019

ಮಹಾಧರ್ಮಕ್ಷೇತ್ರದ ಆರಾಧನಾ ಆಯೋಗವು 2018–2019ರ ಸಾಲಿನ ಆರಾಧನಾ ವಿಧಿಯ ಪಂಚಾಂಗ ಪುಸ್ತಕವನ್ನು ಬೆಂಗಳೂರು ಮಹಾಧರ್ಮಕ್ಷೇತ್ರಕ್ಕಾಗಿ ತಯಾರುಗೊಳಿಸಿದೆ. ಆರಾಧನಾ ವಿಧಿಯ ಪಂಚಾಂಗ 80/– ರೂಗಳಿಗೆ ಈ ಕೆಳಗಿನ ಸ್ಥಳಗಳಲ್ಲಿ ಲಭ್ಯವಿದೆ.

ಪವಿತ್ರ ಬಲಿಪೂಜಾ ಪಂಚಾಂಗವು ದೊರೆಯುವ ಸ್ಥಳದ ಮಾಹಿತಿಗಾಗಿ ದಯವಿಟ್ಟು ಪುಟಸಂಖ್ಯೆ 14ನ್ನು ನೋಡಿ.

## 11. ಗುರುಗಳ ನೂತನ ಪರಿಷತ್ತು

ಧರ್ಮಸಭೆಯ ಶಾಸನ 495/1 ಹೀಗೆ ತಿಳಿಸುತ್ತದೆ: ಪ್ರತಿಯೊಂದು ಧರ್ಮಕ್ಷೇತ್ರದಲ್ಲೂ ಗುರುಗಳ ಪರಿಷತ್ತನ್ನು ಸ್ಥಾಪಿಸಬೇಕು. ಅದೇನೆಂದರೆ ಯಾಜಕವೃಂದವನ್ನು ಪ್ರತಿನಿಧಿಸುವ ಗುರುಗಳ ಒಂದು ಗುಂಪು ಅದಾಗಿದ್ದು, ಧರ್ಮಾಧ್ಯಕ್ಷರ ಸೆನೆಟ್ ಎನಿಸಿಕೊಳ್ಳುತ್ತದೆ. ಪರಿಷತ್ತಿನ ಪಾತ್ರವೇನೆಂದರೆ ಧರ್ಮಾಧ್ಯಕ್ಷರಿಗೆ ಧರ್ಮಸಭೆಯ ಶಾಸನದ ಪ್ರಕಾರ, ಧರ್ಮಕ್ಷೇತ್ರದ ಆಡಳಿತದಲ್ಲಿ ಸಹಕರಿಸುವುದು, ಹೀಗೆ ಧರ್ಮಾಧ್ಯಕ್ಷರಿಗೆ ವಹಿಸಿಕೊಟ್ಟಂತಹ ಒಂದು ಭಾಗದ ದೈವೀ ಪ್ರಜೆಗಳ ಪಾಲನಾ ಸೇವೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರೋತ್ಸಾಹಿಸುವುದಾಗಿದೆ. ನಾನು ಬೆಂಗಳೂರು ಮಹಾಧರ್ಮಕ್ಷೇತ್ರದ ಗುರುಗಳ ನೂತನ ಪರಿಷತ್ತಿನ ರಚನೆಯನ್ನು ದಿನಾಂಕ 14.11.2018ರಿಂದ ಮೂರು ವರ್ಷಗಳ ಅವಧಿಗೆ ಅನುಸಾರವಾಗಿ ಅನ್ವಯಿಸುವಂತೆ ಆದೇಶವನ್ನು ನೀಡಲು ನಾನು ಸಂತೋಷಪಡುತ್ತೇನೆ.

ಗುರುಗಳ ನೂತನ ಪರಿಷತ್ತು ಅದೇ ದಿನ 14.11.2018 ದಂದು ಪ್ರಥಮ ಕೂಟವು ಪಾಲನಾ ಭವನದ – ಪ್ರಾರ್ಥನಾಲಯದಲ್ಲಿ 10.00 ಗಂಟೆಗೆ ಪವಿತ್ರ ಬಲಿಪೂಜೆಯೊಂದಿಗೆ ಆರಂಭಗೊಳ್ಳುವುದು, ಅದಾದ ಬಳಿಕ ಸಭೆ ಸೇರುವುದು ನಂತರ ಮಹಾಧರ್ಮಾಧ್ಯಕ್ಷರ ನಿಲಯದಲ್ಲಿ ಭೋಜನದೊಂದಿಗೆ ಅಂತ್ಯಗೊಳ್ಳುವುದು. ನೂತನ ಪರಿಷತ್ತಿನ ಗುರುಗಳ ಪಟ್ಟಿಯನ್ನು ಈ ಕೆಳಗೆ ನಮೂದಿಸಲಾಗಿದೆ. (ವಿವರಗಳಿಗೆ ದಯವಿಟ್ಟು 15ನ್ನು ನೋಡಿ).

## 12. ಯಾಜಕರ ಧ್ಯಾನಕೂಟ ಹಾಗು ವಲಯಾಧಿಕಾರಿಗಳ ಸಭೆ

ಮಹಾಧರ್ಮಕ್ಷೇತ್ರದ ಗುರುಗಳ ಧ್ಯಾನಕೂಟವು, 21ನೇ ನವೆಂಬರ್ 2018, ಬೆಳಗ್ಗೆ 10.00 ಗಂಟೆಯಿಂದ 1.00 ಗಂಟೆಯವರೆಗೆ ಪಾಲನಾ ಭವನದಲ್ಲಿ ನಡೆಯುತ್ತದೆ. ಮಹಾಧರ್ಮಕ್ಷೇತ್ರದ ಗುರುಗಳು, ಧರ್ಮಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ಧಾರ್ಮಿಕ

ಗುರುಗಳು, ಸಂಸ್ಥೆಗಳಲ್ಲಿ ಮತ್ತು ಸಮಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗುರುಗಳು ಧ್ಯಾನಕೂಟದಲ್ಲಿ ಭಾಗವಹಿಸಿ ಆಧ್ಯಾತ್ಮಿಕ ಪುನಶ್ಚೇತನದ ಪ್ರಯೋಜನ ಪಡೆಯಿರಿ.

ವಲಯಾಧಿಕಾರಿಗಳ ಹಾಗು ಸಮಾದಿಗಳ ವಿಷಯದ ಕುರಿತ ಸಭೆಯು ಅದೇ ದಿನ ಮಧ್ಯಾಹ್ನ 2.30ಕ್ಕೆ ಪಾಲನಾ ಭವನದಲ್ಲಿ ನಡೆಯುವುದು.

## 13. ನೇಮಕಾತಿಗಳು

ವಿವರಗಳಿಗೆ ದಯವಿಟ್ಟು 17ನ್ನು ನೋಡಿ.

## ಅನುಬಂಧ 1

**ನವೆಂಬರ್ ತಿಂಗಳಿನಲ್ಲಿ ಬರುವಂತಹ ಮಹಾಧರ್ಮಕ್ಷೇತ್ರದ ಗುರುಗಳ ಸಂತರ ಹಬ್ಬದ ಆಚರಣೆ**

ವಿವರಗಳಿಗೆ ದಯವಿಟ್ಟು 18ನ್ನು ನೋಡಿ.

## ಅನುಬಂಧ 2

**ನವೆಂಬರ್ ತಿಂಗಳಿನಲ್ಲಿ ಬರುವಂತಹ ಮಹಾಧರ್ಮಕ್ಷೇತ್ರದ ಗುರುಗಳ ಹುಟ್ಟು ಹಬ್ಬ**

ವಿವರಗಳಿಗೆ ದಯವಿಟ್ಟು 18ನ್ನು ನೋಡಿ.

ಶುಭಕಾಮನೆಗಳೊಂದಿಗೆ ದೇವರ ಆಶೀರ್ವಾದಗಳನ್ನು ಕೋರುತ್ತ

ಸಹಿ/–



**✠ ಪೀಟರ್ ಮಚಾದೊ**
ಬೆಂಗಳೂರು ಮಹಾಧರ್ಮಾಧ್ಯಕ್ಷರು